3) **ವಿಷಯ: ಗುಲ್ಬರ್ಗಾ ಜಿಲ್ಲಾ ಪಂಚಾಯಿತಿ ಸದಸ್ಯರ ಮುಖಾಂತರ ಚೆಕ್ ವಿತರಣೆ ಯಾಗುತ್ತಿರುವ ಬಗ್ಗೆ.**

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ಮಾನ್ಯ ಸಭಾಧ್ಯಕ್ಷರೆ, ಶ್ರೀ ಮಾಲೀಕಯ್ಯ ಗುತ್ತೇದಾರ್‌ರವರು ಗಮನ ಸೆಳೆದಿರುವಂಥ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ಮನವಿ ಕೇಳಿದ್ದೇವೆ. ಉತ್ತರ ಏನಾದರೂ ಇದ್ದರೆ ದಯವಿಟ್ಟು ಸರ್ಕಾರದ ಕಡೆಯಿಂದ ಕೊಡಿಸಬೇಕು.

ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಚೆಕ್ ವಿತರಣೆ ವಿಚಾರದಲ್ಲಿ ಇದೆ. ಜಿಲ್ಲಾ ಪಂಚಾಯಿತಿ ಸದಸ್ಯರ ಮುಖಾಂತರ ಮಾಡಿದ್ದಾರೆನ್ನುವ ವಿಚಾರ ಇದೆ. ಅದು ಆ ರೀತಿ ಜಿಲ್ಲಾ ಪಂಚಾಯಿತಿ ಸದಸ್ಯರ ಮುಖಾಂತರ ಹೀಗಾಗಿ ಇದರ ಬಗ್ಗೆ ಕೂಲಂಕಷವಾಗಿ ಯಾವುದೇ ಸರ್ಕಾರದ facilityಇರಬಹುದು. ಫಲಾನುಭವಿಗಳಿಗೆ ಚೆಕ್ ಕೊಡುವುದು ಇರಬಹುದು ಅದು ಆಯಾಯ ಕ್ಷೇತ್ರದ ಶಾಸಕರ ಮುಖಾಂತರ ಆಗಬೇಕು. ಆ ರೀತಿ ಆಗಿಲ್ಲವೆನ್ನುವುದು ಅವರ ತಕರಾರು ಇದೆ. ಅದರ ಬಗ್ಗೆ ನಾವು ವಿಚಾರಣೆ ಮಾಡಿಕೊಂಡು ಯಾರಾದರೂ ಅಧಿಕಾರಿಗಳು mistakeಮಾಡಿದ್ದರೆ ಅದನ್ನು ಸರಿ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಮುಂದೆ ಯಾವುದೇ ಫಲಾನು-ಭವಿಗಳ ಚೆಕ್ ವಿತರಣೆ ಮತ್ತೊಂದು, ಅಲ್ಲಿನ ಶಾಸಕರ ಮುಖಾಂತರ ಆಗಬೇಕೆಂದು ಅವರಿಗೆ instructionsಕೊಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ತಪ್ಪಾಗಿದೆ ಎಂದು ತಾವೇ ಒಪ್ಪಿಕೊಳ್ಳುತ್ತಿದ್ದೀರಿ. ಮುಂದೆ ಈ ರೀತಿ ಆಗದಂತೆ instructionsಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಆಗಿರುವ ತಪ್ಪಿಗೆ ಶಿಕ್ಷೆ ಆಗಬೇಕು.

ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು): ಆಯಿತು. ತಪ್ಪಾಗಿದ್ದರೆ ಆ ಬಗ್ಗೆ ರಿಪೋರ್ಟ್ ಪಡೆದು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ತಪ್ಪಾಗಿರುವುದರಿಂದ ಬಗ್ಗೆ ಅವರು ಒಪ್ಪಿಕೊಳ್ಳುತ್ತಿದ್ದಾರೆ. ಆಗಿರುವುದು ನಿಜ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ಹೀಗೆ ದಿಡೀರ್ ಎಂದು ಎದ್ದು ನಿಂತು ಕೇಳಿಬಿಟ್ಟರೆ ಹೇಗೆ? ಆಮೇಲೆ ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಶಾಸಕರು ಅಧ್ಯಕ್ಷತೆ ವಹಿಸುತ್ತಾರೆಂದು ಮುಖ್ಯಮಂತ್ರಿಗಳು ಹೇಳಿದರು. ನಮ್ಮ ಕ್ಷೇತ್ರದಲ್ಲಿ ನಮ್ಮ ಗಮನಕ್ಕೆ ಬರದೆ

ಫಲಾನುಭವಿಗಳ ಆಯ್ಕೆ ಕೂಡ ಆಗುತ್ತದೆ.ಚೆಕ್ ವಿತರಣೆ ಆಗುತ್ತದೆ. ಪ್ರತಿಯೊಂದು ಪ್ರಕ್ರಿಯೆಗಳು ನಡೆಯುತ್ತಿವೆ. ಶಾಸಕರನ್ನು . ಸುಮ್ಮನೆ ನಾಮಕಾವಾಸ್ಥೆಗೆ ಇಟ್ಟುಕೊಂಡಿದ್ದಾರೆ. ಬಹಳ ತಾರತಮ್ಯವಾಗುತ್ತಿದೆ. ದಯವಿಟ್ಟು ಶಾಸಕರ ಗೌರವ, ಮಾನವನ್ನು ಕಾಪಾಡಿ ಎಂದು ಕೇಳುತ್ತಿರುವುದು.

4) ವಿಷಯ: ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಾನ್ಯ ಶಾಸಕರಾದ ಶ್ರೀ ಎ.ಎಸ್.ಪಾಟೀಲ್‌ರವರು hunger strikeಮಾಡುತ್ತಿರುವ ಬಗ್ಗೆ.

ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದ ಶ್ರೀ ಎ.ಎಸ್.ಪಾಟೀಲ್‌ರವರು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ hunger strike ಮಾಡುತ್ತಿದ್ದಾರೆ. ಬಿಜಾಪುರ ತಾಲ್ಲೂಕಿನಲ್ಲಿ ಭೀಕರ ಬರಗಾಲ ಇದೆ, ಇಡೀ ರಾಜ್ಯದಲ್ಲೇ ಬರಗಾಲವಿದೆ. ಮೊನ್ನೆ ಸುಮಾರು 20,000 ಜನ ಸೇರಿದ್ದರು. ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಬಂಡಿಯಾತ್ರೆ ಮಾಡಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರ ಅದರ ಬಗ್ಗೆ ಏನಾದರೂ ಅಲ್ಲಿ ಹೋಗಿ ಅವರ ಜೊತೆ ಮಾತನಾಡಿ ಅವರದೇನು demandsಇದೆ, ಅದರ ಬಗ್ಗೆ considerಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ.ಏಕೆಂದರೆ ಈ ಸದನದ ಒಬ್ಬ ಸದಸ್ಯರು ಇಲ್ಲಿ ಸದನ ನಡೆದಾಗ ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆಂದು ಅದರ ತೀವ್ರತೆ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ಅದಕ್ಕೆ ದಯವಿಟ್ಟು ಸರ್ಕಾರ ಈ ಬಗ್ಗೆ ಪ್ರತಿಕ್ರಿಯೆ ಕೊಡಬೇಕು ಮತ್ತು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಶಾಸಕರ ಬಳಿಗೆ ಹೋಗಿ ಅವರೊಂದಿಗೆ ಮಾತುಕತೆ ಆಡಿ ಅವರ ಬೇಡಿಕೆಗಳೆಲ್ಲವನ್ನೂ ಪೂರೈಸಬೇಕೆಂಬುದು ನಮ್ಮೆಲ್ಲಾ ಶಾಸಕರ ಒತ್ತಾಯ ಇದೆ. ಅವರೇನು ಪರಿಹಾರ ಕೇಳುತ್ತಿದ್ದಾರೆ ಅದನ್ನು ಈ ತತ್‌ಕ್ಷಣ ಸರ್ಕಾರ ಹೋಗಿ ಕೊಡಬೇಕು.

ಶ್ರೀ ಕೃಷ್ಣಬೈರೇಗೌಡ: ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರದೂ ಇದೆ. ಹೆಚ್ಚಿಗೆ ಮಾತನಾಡಲಾಗುತ್ತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ(ಉಪ ಮುಖ್ಯಮಂತ್ರಿಗಳು): ಈಗಾಗಲೇ ಬರಗಾಲದ ಬಗ್ಗೆ ಚರ್ಚೆಯಾಗುತ್ತದೆ ಎಂಬುದನ್ನು ತಾವು ಗಮನಿಸಿದ್ದೀರಿ. ವಿಶೇಷವಾಗಿ ಮುದ್ದೇಬಿಹಾಳದಲ್ಲಿ ನಮ್ಮ ಗೌರವಾನ್ವಿತ ಶಾಸಕರು ಅಲ್ಲಿ ಆ ಭಾಗದ ಬರಗಾಲದ ಬಗ್ಗೆ ಉಪವಾಸ ಕುಳಿತಿರುವಂಥ ಅಂಶವನ್ನು ಕೂಡ ಈಗೇನು ಪ್ರಸ್ತಾಪವಾಗಿದೆ. ಖಂಡಿತ ನಾನು ಇಲ್ಲಿಂದಲೇ ಅವರಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ ವಿಧಾನಸಭೆ ಅಧಿವೇಶನ ನಡೆಯುತ್ತಿರುವಂಥ ಸಂದರ್ಭದಲ್ಲಿ ನಾವು ಯಾರೂ ತಕ್ಷಣ ಅಲ್ಲಿಗೆ ಹೋಗಿ ಅವರಿಗೆ ಸಮಾಧಾನ ಮಾಡಿ ಅವರನ್ನು ಕರೆದುಕೊಂಡು